4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 3291/2018 ಚಾ.ಸಾ.-1 ಅ.ಸಾ.-1

ಪ್ರ.ವ.ಬೊ. ದಿಃ 14.02.2020

ಸಾಕ್ಷಿದಾರನ ಹೆಸರು : ರಶ್ಮಿ.ವಿ

ತಂದೆಯ ಹೆಸರು : ವೆಂಕಟೇಗೌಡ.ಆರ್

ವಯಸ್ಸು : 32 ವರ್ಷ

ಕೆಲಸ : ಖಾಸಗಿ ಕೆಲಸ

ವಾಸ : ಚನ್ನಸಂದ್ರ, ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ಚಾ.ಸಾ.2 ನನ್ನ ತಂದೆ, ಚಾ.ಸಾ.3 ನನ್ನ ತಾಯಿ. ಒಂದನೇ ಆರೋಪಿ ನನ್ನ ಗಂಡ. 2ನೇ ಆರೋಪಿ ಒಂದನೇ ಆರೋಪಿಯ ಪರಿಚಯದವರು. ನನ್ನ ತಂದೆ ಸರ್ಕಾರಿ ನಿವೃತ್ತ ಶಿಕ್ಷಕ. ನನ್ನ ತಾಯಿ ಗೃಹಿಣಿ. ನನ್ನ ತಂದೆ ತಾಯಿಗೆ ನಾನು ನನ್ನ ಅಕ್ಕ ಇಬ್ಬರು ಮಕ್ಕಳು. ನನ್ನ ಅಕ್ಕನಿಗೆ ಮದುವೆಯಾಗಿ ಗಂಡನ ಜೊತೆ ವಾಸವಾಗಿದ್ದಾಳೆ. ಒಂದನೇ ಆರೋಪಿ ನನ್ನ ಶಾಲಾ ದಿನಗಳಿಂದ ನನ್ನ ಸ್ನೇಹಿತನಾಗಿದ್ದು, ನಾನು ಆರೋಪಿ ಪ್ರೀತಿಸಿ ಪೋಷಕರ ಒಪ್ಪಿಗೆ ಮೇರೆಗೆ 2009 ರಲ್ಲಿ ನನ್ನ ತಂದೆ ಅನ್ನಪೂರ್ಣ ತಪೋಕ್ಷೇತ್ರ, ಕನಕಪುರ ರಸ್ತೆ ಇಲ್ಲಿ ಮದುವೆ ಜರುಗಿತ್ತು, ಆರತಕ್ಷತೆಯನ್ನು ಭಗಿನಿ ಪ್ಯಾಲೇಸ್ ಮಾರತಹಳ್ಳಿಯಲ್ಲಿ ನನ್ನ ತಂದೆ ಜರುಗಿಸಿದ್ದರು. ಒಂದನೇ ಆರೋಪಿಯ ತಂದೆ ಬೆಂಗಳೂರು ಮಿಲ್ಕ್ ಡೈರಿಯಲ್ಲಿ ನೌಕರರಾಗಿದ್ದು, 2014 ರಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಕಾರಣ ಒಂದನೇ ಆರೋಪಿ ಎಲ್ಲಾ ಕಡೆ ಸಾಲ ಮಾಡಿ, ಎಲ್ಲರ ಹೆಸರುಗಳಲ್ಲಿ ಸಾಲ ಪಡೆದು, ಸಾಲವನ್ನು ಮನೆ ಮೇಲೆ ತಂದ ಕಾರಣ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಂಡಿದ್ದರು, ಹಾಗೂ ಅವರ ಮಾತಿಗೆ ಒಂದನೇ ಆರೋಪಿ ಮತ್ತು ನನ್ನ ಅತ್ತೆ ಬೆಲೆ ಕೊಡುತ್ತಿರಲಿಲ್ಲ, ಆ ಕಾರಣ ಅವರು ನೊಂದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ನನ್ನ ಅತ್ತೆ ಒಂದನೇ ಆರೋಪಿಯ ತಾಯಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು.

ಒಂದನೇ ಆರೋಪಿ ಬಿ.ಇ ಎಲೆಕ್ಟ್ರಾನಿಕ್ಸ್ ವಿದ್ಯಾಭ್ಯಾಸ ಮಾಡಿಕೊಂಡಿದ್ದಾರೆ. ನಾನು ಮದುವೆನಂತರ ಒಂದನೇ ಆರೋಪಿ ಜೊತೆ ಅವರ ಕುಟುಂಬದಲ್ಲಿ ವಾಸವಾಗಿದ್ದೆ. ಮದುವೆ ಸಂದರ್ಭದಲ್ಲಿ ನನಗೆ campus interview ನಲ್ಲಿ ಸೆಲೆಕ್ಟ್ ಆಗಿದ್ದು, joining ಅವಧಿಯಲ್ಲಿದ್ದೆ. ಮದುವೆಯಾದ ನಂತರ ಸ್ವಲ್ಪ ದಿನಗಳ ಕಾಲ ಕುಟುಂಬ ಚೆನ್ನಾಗಿ ನಡೆಯುತ್ತಿತ್ತು, ನಂತರ ಒಂದನೇ ಆರೋಪಿ ತವರು ಮನೆಯಿಂದ ಬೆಳ್ಳಿ ಸಾಮಾನು, ದುಡ್ಡು ತೆಗೆದುಕೊಂಡು ಬರಲು ಒತ್ತಡ ಮಾಡುತ್ತಿದ್ದರು. ನಂತರ ನಾನು ಕೆಲಸಕ್ಕೆ ಸೇರಿಕೊಂಡಿದ್ದು, ನನ್ನ ಸಂಬಳದ ಖಾತೆಯ ಪಾಸ್‌ವರ್ಡ್‌ನ್ನು ಒಂದನೇ ಆರೋಪಿ ಪಡೆದು ಅವರೇ ನನ್ನ ಖಾತೆಯಿಂದ ಅವರ ಖಾತೆಗೆ ಹಣ ವರ್ಗಾವಣೆ ಮಾಡಿಕೊಳ್ಳುತ್ತಿದ್ದರು. ಯಾಕೆ ಎಂದು ಕೇಳಿದರೆ ಒಂದನೇ ಆರೋಪಿ ಮತ್ತು ಅವರ ತಾಯಿ ಬೈಯ್ಯುತ್ತಿದ್ದರು. ಒಂದನೇ ಆರೋಪಿ tuition centre ಇಟ್ಟಿದ್ದು ಅಲ್ಲಿ ಹೆಣ್ಣು ಮಕ್ಕಳ ಜೊತೆ ಅನುಚಿತ ವರ್ತನೆ ಮಾಡುತ್ತಿದ್ದು, ಅವರ ತಂದೆತಾಯಿ tuition centre ಬಳಿ ಬಂದು 2012 ರಲ್ಲಿ tuition centre ನಿಲ್ಲಿಸಿದರು. ನಂತರ ನಾನು ವಿಪ್ರೋ ಕಂಪನಿಯಿಂದ Accenture ಸೇರಿಕೊಂಡಿದ್ದೆ. Tuition centre ಬಬಿಟ್ಟ ನಂತರ ಏನು ಕೆಲಸ ಮಾಡುತ್ತೀರಿ ಎಂದು ಕೇಳಿದರೆ ಒಂದನೇ ಆರೋಪಿ ಮತ್ತು ಅವರ ತಾಯಿ ಬೈಯ್ಯುತ್ತಿದ್ದರು, ನಾನು ವ್ಯಾಪಾರ ಮಾಡುತ್ತಿದ್ದು, ಅದನ್ನು ಕೇಳುವ ಅಧಿಕಾರ ಇಲ್ಲ ಎಂದು ಹೇಳುತ್ತಿದ್ದರು. ಎಲ್ಲರ ಹೆಸರನಲ್ಲಿ ಅಂದರೆ ನನ್ನ ಮತ್ತು ನನ್ನ ಮಾವನ ಹೆಸರಿನಲ್ಲಿ ಸಾಲಗಳನ್ನು ತೆಗೆದಿದ್ದು, ನಮ್ಮ ಸಂಬಂಧಿಕರ ಮತ್ತು ಎಲ್ಲಾ ಕಡೆ ಸಾಲ ಮಾಡಿದ್ದರು. ನನ್ನ ಎಲ್‌ಐಸಿ ಪಾಲಿಸಿ ಮೇಲೆ ಸಹ ಸಾಲ ಮಾಡಿದ್ದರು. ಅದರ ಬಗ್ಗೆ ವಿಚಾರಿಸಿದರೆ ಒಂದನೇ ಆರೋಪಿ ಬೈದು ಹೊಡೆಯುತ್ತಿದ್ದರು. 2015 ನೇ ಫೆಬ್ರವರಿ ತಿಂಗಳಲ್ಲಿ ನಾನು 9 ತಿಂಗಳ ಗರ್ಭಿಣಿ ಇದ್ದಾಗ ನನ್ನ ತವರು ಮನೆಗೆ ಹೋಗಿದ್ದೆ. ಮಾರ್ಚ್‌ನಲ್ಲಿ ಹೆಣ್ಣು ಮಗು ಹುಟ್ಟಿದ್ದು, ಆಗ 1ನೇ ಆರೋಪಿ ಆಗಾಗ್ಗೆ ಮನೆಗೆ ಬಂದು ಹೋಗುತ್ತಿದ್ದು, ಆಗ ಸಹ ನನ್ನ ತಾಯಿ ಹತ್ತಿರ ಹಣ ಕೇಳುತ್ತಿದ್ದರು. ನಂತರ ಕಾಡುಗೋಡಿಯಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದೆವು. ನಾನು ಡೆಲಿವರಿಗೆ ಬಂದಾಗ ನನ್ನ ಆಕ್ಸಿಸ್ ಬ್ಯಾಂಕ್, ವೈಟ್‌ಫೀಲ್ಡ್ ಮತ್ತು ಸಿಟಿ ಬ್ಯಾಂಕ್, ಎಂ.ಜಿ.ರಸ್ತೆ ಚೆಕ್ ಪುಸ್ತಕಗಳು ಒಂದನೇ ಆರೋಪಿಯ

ಮನೆಯಲ್ಲಿದ್ದವು. 1ನೇ ಆರೋಪಿ ಎರಡನೇ ಆರೋಪಿ ಜೊತೆ ಶಾಮೀಲಾಗಿ ನನ್ನ ಸಿಟಿ ಬ್ಯಾಂಕಿನ ಚೆಕ್‌ನಲ್ಲಿ ಅವರೇ ನಕಲಿ ಸಹಿ ಮಾಡಿಕೊಂಡು ಚೆಕ್ ಅಮಾನ್ಯ ಪ್ರಕರಣವನ್ನು ಬಂಗಾರಪೇಟೆಯಲ್ಲಿ 2ನೇ ಆರೋಪಿ ನನ್ನ ವಿರುದ್ಧ ದಾಖಲಿಸಿದ್ದು, ರೂ.9,80,000/- ಮೊತ್ತಕ್ಕೆ ಹಾಕಿದ್ದು, ಪೊಲೀಸರು ಆ ಕೇಸಿನ ಸಮನ್ಸ್ ತಂದಿದ್ದು, ಆ ಸಮಯದಲ್ಲಿ ಏನಿದು ಕೇಸು ಎಂದು ಹೋಗಿ ನೋಡಿದಾಗ, ಚೆಕ್ ನನ್ನದಾಗಿದ್ದು ಸಹಿ ನನ್ನದಿರಲಿಲ್ಲ, ನಂತರ ನನ್ನ ಸಹಿ forgery ಆಗಿದೆ ಎಂದು ತಿಳಿಯಿತು. ಆ ನಂತರ ಈ ಖಾಸಗಿ ದೂರನ್ನು ಸಲ್ಲಿಸಿದ್ದೆ. ಖಾಸಗಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ.ಪಿ.1 (4 ಹಾಳೆಗಳು) ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಿ.ಪಿ.1 ರ ಜೊತೆ ಪ್ರ.ವ.ವರದಿ ಸಂಖ್ಯೆ 128/16 ಕ್ಕೆ ಸಂಬಂಧಪಟ್ಟ ಪ್ರತಿಯನ್ನು ನಿ,ಪಿ.2, ಅದಕ್ಕೆ ಸಂಬಂಧಪಟ್ಟ ದೂರನ್ನು ನಿ.ಪಿ.3, ಪ್ರ.ವ.ವರದಿ ಸಂಖ್ಯೆ 423/16 ಕ್ಕೆ ಸಂಬಂಧಪಟ್ಟ ಪ್ರತಿಯನ್ನು ನಿ,ಪಿ.4, ಸಿಸಿ ಸಂಖ್ಯೆ 810/16 ಕ್ಕೆ ಸಂಬಂಧಪಟ್ಟ ಪ್ರತಿ ನಿ.ಪಿ.5 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಚೆಕ್‌ನ ದೃಡೀಕೃತ ಪ್ರತಿ ಹಾಜರುಪಡಿಸಲು ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು